ಮುರಿದುಬೀಳುವ ಮದುವೆಯ ಬಂಧವನ್ನು ಬೆಳೆಯುವಾಗಲೇ ನೋಡಿರುತ್ತಾರೆ. ಕೆಲವರಂತೂ ಎರಡೆರಡು ಮದುವೆಗಳನ್ನು ಮುರಿದುಕೊಂಡವರ ಸ್ಥಿತಿಯನ್ನು ಕಂಡಿರುತ್ತಾರೆ. ಹೀಗಾಗಿ ಅಲ್ಲಿ ಎಷ್ಟೋ ಯುವಕ–ಯುವತಿಯರಿಗೆ ಮದುವೆ ಬೇಕು ಎನಿಸುವುದಿಲ್ಲ. ಇದಕ್ಕಾಗಿ ಸಾಮಾಜಿಕ ಒತ್ತಡವೂ ಅಲ್ಲಿ ಇಲ್ಲ. ಇತ್ತೀಚೆಗೆ ಲೈಂಗಿಕ ಸಾಂಗತ್ಯದ ಪ್ರಮಾಣ ಕೂಡ ಅಲ್ಲಿ ಕಡಿಮೆಯಾಗುತ್ತಿದೆ ಎಂದು ಹೇಳುತ್ತಾರೆ. ಅದಕ್ಕೆ ಪೂರಕವಾಗಿ ಕೆಲವು ಅಂಕಿಅಂಶಗಳನ್ನೂ ನೀಡುತ್ತಾರೆ. ಲೈಂಗಿಕ ಚಟುವಟಿಕೆಯಿಂದ ಸಿಗುವಂತಹ ತೃಪ್ತಿಯನ್ನು ವಿಡಿಯೊ ಗೇಮ್‌ನಿಂದಲೋ ಮತ್ತ್ಯಾವುದೋ ಡಿಜಿಟಲ್ ದಾರಿಯಿಂದಲೋ ಪಡೆದುಕೊಂಡು ಯುವಜನತೆ ತಮ್ಮ ಜಗತ್ತಿನಲ್ಲೇ ಇರುತ್ತಾರೆ.

'ಪಾತಿವ್ರತ್ಯ' ಎನ್ನುವುದು ಈಗ ಕ್ಲೀಷೆಯಾಗಿದೆ. 'ಟ್ಯಾಬೂ ಆಫ್ ಪ್ಯೂರಿಟಿ' ಎಂದೇ ಒಂದು ಕಾಲದಲ್ಲಿ ಇದನ್ನು ಕರೆಯುತ್ತಿದ್ದರು. ಈಗ ಮನುಷ್ಯನಿಗೆ ತನ್ನ ಅಗತ್ಯ ಅಷ್ಟೆ ಮುಖ್ಯವಾಗುತ್ತಿದೆ. ಜಪಾನ್ ಹಾಗೂ ಅಮೆರಿಕ ಇಂತಹ ವಿಷಯದಲ್ಲಿ ಒಂದೇ ರೀತಿಯಲ್ಲಿವೆ. ಮಧ್ಯಪ್ರಾಚ್ಯದಲ್ಲಿ ಈಗಲೂ ಸಾಂಪ್ರದಾಯಿಕ ಮನಃಸ್ಥಿತಿಯವರು ಹೆಚ್ಚು. ಪಶ್ಚಿಮ ಯೂರೋಪ್ ಕೂಡ ಸಾಕಷ್ಟು ತೆರೆದುಕೊಂಡುಬಿಟ್ಟಿದೆ. ಭಾರತದ ಮೆಟ್ರೊ ನಗರಗಳ ಅಸಂಖ್ಯ ಜನರ ಕುಟುಂಬವಿಮುಖ ಧೋರಣೆಯು ನ್ಯೂಯಾರ್ಕ್‌ನಲ್ಲೋ, ಸ್ಯಾನ್ ಫ್ರಾನ್ಸಿಸ್ಕೊದಲ್ಲಿಯೊ ಇರುವ ರೀತಿಯಲ್ಲೇ ಇದೆ.

ಯುವಕ ಅಥವಾ ಯುವತಿಯರು ಯಾರದೋ ತೊಡೆಮೇಲೆ ಮಲಗಿ ಮನದಾಳ ಬಿಚ್ಚಿಡುವುದು ಒಂದು ಸೂಕ್ಷ್ಮ ಭಾವವೇ ಹೌದು. ವಿವಾಹದ ಸಾಂಸ್ಥಿಕ ಚೌಕಟ್ಟಿನಿಂದ ಆಚೆ ಇದನ್ನು ಪಡೆಯುವುದು ಹೊಸಕಾಲದ ಸಾಧ್ಯತೆ. ನಮ್ಮ ಕಾಲದಲ್ಲಿ ಯಾರೋ ಅಪರಿಚಿತ ಹುಡುಗಿಯ ಅಥವಾ ಹುಡುಗನ ಕೈಹಿಡಿದು ನಡೆಯಲು ಕೂಡ ಸಾಮಾಜಿಕ ಕಟ್ಟುಪಾಡುಗಳಿದ್ದವು. ನಾವೆಲ್ಲ ಗೋಡೆಗಳನ್ನು ಒಂದಿಷ್ಟು ದಾಟಿ, ಬದುಕು ಕಟ್ಟಿಕೊಂಡಿದ್ದೆವು. ಈಗಿನ ತಲೆಮಾರಿನವರಿಗೆ ಬಯಲಿನಲ್ಲಿ ಅಂತಹ ಗೋಡೆಯೇ ಇಲ್ಲ. ಹೀಗಾಗಿ ದಾಟುವ ಪ್ರಶ್ನೆಯೇ ಇಲ್ಲ.

ಅಪರಿಚಿತರಲ್ಲಿ ಸಾತತ್ಯ ಕಂಡುಕೊಳ್ಳುವ ಹೊಸ ಪರಿಯನ್ನು 'ಸೈಕಲಾಜಿಕಲ್ ಪ್ರಾಸ್ಟಿಟ್ಯೂಷನ್' ಎನ್ನಬಹುದೇನೊ. ಹಿಂದೆ ಲೈಂಗಿಕ ಆಕಾಂಕ್ಷೆಗಾಗಿ ವಿವಾಹ ಸಂಬಂಧವನ್ನೂ ಮೀರಿ ಗೊತ್ತಿಲ್ಲದವರನ್ನು ಹುಡುಕಿ ಹೊರಡುತ್ತಿರುವವರಿಗೆ ಏನನ್ನೋ ದಾಟಿಬಂದು ಸಾಧಿಸಿದ ಭಾವ ಇರುತ್ತಿತ್ತು ಅಥವಾ ಅಂಥವರಿಗೆ ಲೈಂಗಿಕ ಸಂಬಂಧ ಬಗೆಬಗೆಯ ವೈಯಕ್ತಿಕ ಕಾರಣಗಳಿಂದಾಗಿ ಅಗತ್ಯವಿತ್ತು. 'ಸೈಕಲಾಜಿಕಲ್ ಪ್ರಾಸ್ಟಿಟ್ಯೂಷನ್' ಅನ್ನೂ ಅದಕ್ಕೇ ಸಮೀಕರಿಸಬಹುದು.

ಒಂದಿಷ್ಟು ಭಾಗದ ಯುವಜನತೆಯ ಮನಃಸ್ಥಿತಿ ಹೀಗೆ ಆಗಿರಲು ವೃತ್ತಿಬದುಕಿನ ಒತ್ತಡ ಕೂಡ ಕಾರಣವೆನ್ನುವುದೂ ಅಧ್ಯಯನಗಳಿಂದ ತಿಳಿದುಬಂದಿದೆ. ಭಾರತದ ಮೆಟ್ರೊ ನಗರಗಳು ಪಾಶ್ಚಾತ್ಯ ಪ್ರಭಾವಕ್ಕೆ ಸಿಲುಕಿದಂಥವೇ. ಹೀಗಾಗಿ ಇಲ್ಲೂ ಇಂತಹ ಮನಃಸ್ಥಿತಿಯ ಯುವಜನತೆಯನ್ನು ನಾವು ನೋಡುತ್ತಿದ್ದೇವೆ. ಕುಟುಂಬ ವ್ಯವಸ್ಥೆಯ ಸಿದ್ಧ ಚೌಕಟ್ಟಿನಿಂದ ಹೊರಬಂದು, ತಮ್ಮ ಖುಷಿಗೆ ನೆಮ್ಮದಿಯಿಂದ ಬದುಕುವುದೇ ಸರಿ ಎಂದು ಅನೇಕರು ತೀರ್ಮಾನಿಸಿದ್ದಾರೆ. ಹೆಣ್ಣುಮಕ್ಕಳಂತೂ ತಾವೇ ಕುಟುಂಬದಲ್ಲಿ ಕಂಡ ತೇಯುವ ಮಹಿಳೆಯರ ಜೀವನ ಕ್ರಮದಿಂದ ರೋಸಿಹೋಗಿ, ಅಂತಹ ಭವಬಂಧನ ನಮಗೆ ಬೇಡ ಎಂಬ ತೀರ್ಮಾನಕ್ಕೆ ಬಂದಿರಲೂ ಸಾಕು.

ಸೋಫಿ ಅವರು ಬರೆದಿರುವ ಪುಸ್ತಕದ ಸಾರಾಂಶಕ್ಕೆ ಕಾರಣವಾದ ಸಾಮಾಜಿಕ ಅಂಶಗಳು ಅಭಿವೃದ್ಧಿ ಹೊಂದಿದ ಹಲವು ದೇಶಗಳಲ್ಲಿ ಇವೆ ಎನ್ನುವುದಂತೂ ಸ್ಪಷ್ಟ. ಭಾರತದಲ್ಲಿಯೂ ಅಂತಹುದೇ ಪರಿಣಾಮದ ಸಾಮಾಜಿಕ ಬದಲಾವಣೆ ಸಣ್ಣ ಮಟ್ಟದಲ್ಲಿ ಕಾಣುತ್ತಿದೆ, ವಿಶೇಷವಾಗಿ ಮಹಾನಗರಗಳಲ್ಲಿ. 'ಅಬಾಂಡನ್ ಫ್ಯಾಮಿಲಿ' ಎಂದು ಇಲ್ಲಿ ಜೋರಾಗಿ ಹೇಳುವ ಸ್ಥಿತಿ ಇಲ್ಲದೇ ಇದ್ದರೂ, 'ಸಾಕಪ್ಪಾ ಸಾಕು... ಶಿವನೇ' ಎಂಬಂಥ ಉದ್ಗಾರಗಳಂತೂ ವ್ಯಾಪಕವಾಗುತ್ತಿವೆ.

ಸಾಮಾಜಿಕ ಚಲನೆಗಳಿಂದ ಕುಟುಂಬ ವ್ಯವಸ್ಥೆಯಲ್ಲಿ ಉಂಟಾಗಿರುವ ಬದಲಾವಣೆಗಳು ದೂರ ದೇಶದ ವಿದ್ಯಮಾನಗಳು ಎಂದು ಭಾವಿಸುವ ಸ್ಥಿತಿ ಈಗಿಲ್ಲ. ದೇಶದೇಶಗಳ ನಡುವಣ ಗೆರೆ ಭೌತಿಕವಾಗಿಯಷ್ಟೇ ಉಳಿದಿರುವ ದಿನಗಳಲ್ಲಿ, ಸಾಮಾಜಿಕ ವ್ಯವಸ್ಥೆ ಕೂಡ ನಿಧಾನವಾಗಿ ಏಕರೂಪವನ್ನು ಪಡೆದುಕೊಳ್ಳುತ್ತಿದೆ. ಹಾಗಾಗಿ, ಜಾಗತಿಕ ಸಮಾಜದಲ್ಲಿನ ಬದಲಾವಣೆಗಳು ನಮ್ಮಲ್ಲಿಯೂ ನಮಗರಿವಿಲ್ಲದಂತೆಯೇ



ಘಟಿಸತೊಡಗಿರುತ್ತವೆ. ಆ ಬದಲಾವಣೆಗಳನ್ನು ಎಷ್ಟರಮಟ್ಟಿಗೆ ಭಾರತೀಯಗೊಳಿಸಿಕೊಳ್ಳುತ್ತೇವೆ ಎನ್ನುವುದರ ಮೇಲೆ ನಮ್ಮ ಕೌಟುಂಬಿಕ ವ್ಯವಸ್ಥೆಯ ನಾಳೆಗಳ ನಿರ್ಧಾರವಾಗುತ್ತದೆ.

## ಕಾರಣಗಳ ಹುಡುಕಾಟ

ಕೌಟುಂಬಿಕ ಜೀವನದಲ್ಲಿ ಹೆಚ್ಚುತ್ತಿರುವ ಕ್ಷೋಭೆಗಳಿಗೆ ಕಾರಣಗಳೇನು ಎನ್ನುವ ಪ್ರಶ್ನೆಗೆ ಉತ್ತರಗಳನ್ನು ಕಂಡುಕೊಳ್ಳುವುದು ಹೆಚ್ಚು ಕಷ್ಟದ ಸಂಗತಿಯೇನಲ್ಲ. ಕುಟುಂಬಗಳು ಒಡೆಯುತ್ತಾ ಹೋದಂತೆ, ಮನುಷ್ಯ ಮನುಷ್ಯನ ನಡುವೆ ಗೋಡೆಗಳು ಉಂಟಾಗುತ್ತಿವೆ. ಈ ಅಂತರವನ್ನು ತುಂಬಿಕೊಳ್ಳುವ ಉದ್ದೇಶದಿಂದ ವ್ಯಕ್ತಿ ಸಾಮಾಜಿಕ ಜಾಲತಾಣಗಳ ಮೊರೆಹೋಗುತ್ತಾನೆ. ನೇರವಾಗಿ ರೂಢಿಸಿಕೊಳ್ಳಬಹುದಾದ ಮನುಷ್ಯ ಸಂಬಂಧಗಳ ಬದಲಾಗಿ, ಡಿಜಿಟಲ್ ಪರದೆಯ ಚೌಕಟ್ಟಿನಲ್ಲಿ ಸ್ನೇಹವಲಯವನ್ನು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಕೋಣೆಯಲ್ಲಿ ಒಂಟಿಯಾಗಿ ಕುಳಿತೇ ವಿಶ್ವದೊಂದಿಗೆ ಸಂಪರ್ಕ ಹೊಂದಲು ಹಂಬಲಿಸುತ್ತಾನೆ. ಆದರೆ, ಈ ಡಿಜಿಟಲ್ ಸಂಬಂಧಗಳು ಅದೆಷ್ಟು ಪೊಳ್ಳಾಗಿರುತ್ತವೆ ಎನ್ನುವುದು ಅರಿವಿಗೆ ಬರುವುದಕ್ಕೆ ಹೆಚ್ಚು ಸಮಯವೇನೂ ಬೇಕಾಗುವುದಿಲ್ಲ. ವೃತ್ತಿ ಸಂಬಂಧಿತ ಒತ್ತಡಗಳು ಕೂಡ ಈ ತಲೆಮಾರನ್ನು ಹೈರಾಣಾಗಿಸುತ್ತಿವೆ. ನಾವೇ ಹೇರಿಕೊಂಡ ಡೆಡ್‌ಲೈನ್‌ಗಳು ಹಾಗೂ ಟಾರ್ಗೆಟ್‌ಗಳು ಬದುಕಿನ ಸಾರವನ್ನೇ ಹೀರಿಕೊಂಡುಬಿಡುತ್ತವೆ. ಸಂಬಂಧಗಳು ನೀಡುವ ಸುಖಕ್ಕಿಂತಲೂ ಸರಕುಗಳು ನೀಡುವ 'ಕಂಫರ್ಟ್'ಗೆ ಹೆಚ್ಚಿನ ಆದ್ಯತೆ ನೀಡುತ್ತೇವೆ. ಇದೆಲ್ಲದರ ಜೊತೆಗೆ, ಬದುಕಿನ ಚೆಲುವನ್ನು ಹೆಚ್ಚಿಸಲು ಅಗತ್ಯವಾದ ನೈತಿಕ ನೆಲೆಗಟ್ಟನ್ನು ರೂಪಿಸಬೇಕಾದ ಶಿಕ್ಷಣ, ತನ್ನ ಮೂಲೋದ್ದೇಶವನ್ನು ಮರೆತು ಶಾಲೆಗಳನ್ನು ರಣರಂಗಗಳನ್ನಾಗಿಸಿದೆ. ಶಾಲಾಕಾಲೇಜುಗಳು ಮಾನವೀಯ ವ್ಯಕ್ತಿಗಳನ್ನು ರೂಪಿಸುವ ಬದಲಿಗೆ, ಓಟದ ಕುದುರೆಗಳನ್ನು ರೂಪಿಸುತ್ತಿದೆ. ಇವೆಲ್ಲವೂ ವ್ಯಕ್ತಿಯ ಬದುಕಿನಲ್ಲಿ ತಲೆದೋರಿರುವ ಕ್ಷೋಭೆಗೆ ಕಾರಣವೇ ಆಗಿವೆ.

ಜೀವನದ ಅಸ್ತಿಭಾರವೇ ಸಡಿಲವಾದಂತೆ ತೋರಿದಾಗ, ಮನುಷ್ಯ ನೆಮ್ಮದಿಯ ಬದುಕು ನಡೆಸುವುದು ಹೇಗೆ ಸಾಧ್ಯ? ಆಸೆಯೇ ದುಃಖಕ್ಕೆ ಮೂಲ ಎಂದ ಬುದ್ಧನ ಮಾತು ನಮಗೆ ಸರಿಯಾಗಿ ಅರ್ಥವಾದಾಗ, ವರ್ತಮಾನದ ತವಕ ತಲ್ಲಣಗಳಿಗೆ ಉತ್ತರ ಕಂಡುಕೊಳ್ಳುವ ದಾರಿ ಹೊಳೆಯುವುದು ಸಾಧ್ಯ? ಇಲ್ಲದೆ ಹೋದಲ್ಲಿ, ಸುಖವನ್ನು ಸಂತೆಯಲ್ಲಿ ಹುಡುಕುವ ಪ್ರಯತ್ನಗಳು ಮತ್ತೆ ಮತ್ತೆ ನಡೆಯುತ್ತಲೇ ಇರುತ್ತವೆ.

ಪ್ರತಿಕ್ರಿಯಿಸಿ: feedback@sudha.co.in